**ಸಿನಿಮಾ ನಿರ್ದೇಶನದಲ್ಲಿ ಕಲೆಯ ಕುರಿತಾಗಿ ಇರುವ ವಿಷಯ ಒಂದಾದರೆ ಅದರ ಹೊರತಾಗಿ ಇರುವ ವಿಷಯಗಳೇ ಸಾವಿರ ಇರುತ್ತವೆ. ನಿರ್ದೇಶಕ ತನ್ನ ತಲೆಯಲ್ಲಿರುವುದಷ್ಟೇ ಅಲ್ಲ, ತಂತ್ರಜ್ಞರು, ಕಲಾವಿದರು ಇವರೆಲ್ಲರದ್ದೂ ಒಬ್ಬೊಬ್ಬರನ್ನೂ ಒಂದೊಂದು ಸ್ವಭಾವಗಳಿರುತ್ತವೆ. ಅವರನ್ನೆಲ್ಲ ನಿಭಾಯಿಸುವುದು ಸುಲಭ ಅಲ್ಲ. ಅವುಗಳನ್ನೆಲ್ಲ ಈಗಲೂ ನನಗೆ ನಿಭಾಯಿಸುವುದು ಗೊತ್ತಿಲ್ಲ. ಆದರೆ ಮೊದಲ ಸಿನಿಮಾದಿಂದ ಸಾಕಷ್ಟು ಕಲಿತಿದ್ದೇನೆ. ಮುಂದಿನ ಸಿನಿಮಾ ಮಾಡುವಾಗ ಆ ಎಲ್ಲ ಪಾಠಗಳನ್ನೂ ಮನಸಲ್ಲಿ ಇಟ್ಟುಕೊಳ್ಳಬೇಕು ಎಂದು ಅಂದುಕೊಂಡಿದ್ದೇನೆ.**

**ನನ್ನ ಬಳಿ ಇನ್ನೂ ಹಲವು ಕಥೆಗಳು ಸಿದ್ಧ ಇವೆ. ಕೆಲವು ನಿರ್ಮಾಪಕರು ಸಿನಿಮಾ ಮಾಡಿಕೊಡಿ ಎಂದು ಕೇಳಿದ್ದಾರೆ. ಆದರೆ 'ಸೂಜಿದಾರ' ಬಿಡುಗಡೆಯಾಗಲಿ ಎಂದು ಕಾಯುತ್ತಿದ್ದೇನೆ.**



ಮನೆ ಬಿಟ್ಟು ಬೇರೆ ಎಲ್ಲಿಯೂ ಇದ್ದಿರಲಿಲ್ಲ. ನನ್ನ ತಾಯಿಯಿಂದ, ಕುಟುಂಬದಿಂದ ದೂರ ಇದ್ದು ನೀನಾಸಮ್‌ನಲ್ಲಿ ಕಳೆದ ಎರಡು ವರ್ಷಗಳು ತುಂಬ ಬೇರೆಯ ಥರದ ಬೆಳವಣಿಗೆಗೆ ಕಾರಣವಾಯ್ತು. ಈ ಹಿಂದೆ ಏನು ಮಾಡಿದ್ದೇನೆ; ಈಗ ಏನು ಮಾಡುತ್ತಿದ್ದೇನೆ, ಕಲೆ ಎಂದರೇನು, ಸಾಹಿತ್ಯ ಎಂದರೇನು, ಅದನ್ನು ಹೇಗೆ ಪ್ರವೇಶಿಸಬೇಕು ಎಂಬುದರ ಕುರಿತಾಗಿಯೆಲ್ಲ ಸ್ಪಷ್ಟವಾದ ಚಿತ್ರಣ ಸಿಕ್ಕಿದ್ದು ಆ ನಂತರವೇ.

ನೀನಾಸಮ್‌ಗೆ ಹೋಗಿದ್ದಾಗ ಒಮ್ಮೆಲೇ ಇವೆಲ್ಲವೂ ಅರಿವಾಯ್ತು ಅಂತಲ್ಲ. ಅಲ್ಲಿರುವಾಗ ಅಲ್ಲಿರುವುದರ ಜೊತೆ ಹೊಂದಿಕೊಂಡು, ಇಪ್ಪತ್ತನಾಲ್ಕು ಗಂಟೆಯೂ ಅದರಲ್ಲಿಯೇ ಮುಳುಗಿಕೊಂಡು ಇದ್ದೆ ಅಷ್ಟೆ. ಅಲ್ಲಿಂದ ಹೊರಗೆ ಬಂದ ಮೇಲೆಯೇ ಅಲ್ಲಿನ ಪ್ರಭಾವ ಗೊತ್ತಾಗಿದ್ದು. ಮೀನಿಗೆ ನೀರಿನಿಂದ ಹೊರಗೆ ಬಿದ್ದ ಮೇಲೆಯೇ ನೀರಿನ ಬೆಲೆ ಗೊತ್ತಾಗುವುದು; ಒದ್ದಾಡುವುದುಲ್ಲವಾ? ಹಾಗೆಯೇ ಇದು.

◆ **ನೀನಾಸಮ್ ದಿನಗಳಲ್ಲಿ ನಿಮ್ಮ ಮೇಲೆ ಅತಿಯಾಗಿ ಪ್ರಭಾವ ಬೀರಿದ ವ್ಯಕ್ತಿಗಳು– ಕೃತಿಗಳು ಯಾವವು?**

ನೀನಾಸಮ್‌ನಲ್ಲಿ ನಾಲ್ಕು ನಾಟಕಗಳನ್ನು ಮಾಡುತ್ತಾರೆ. ಮೊದಲ ನಾಟಕವೇ ಸಂಸ್ಕೃತದ 'ಅಭಿಜ್ಞಾನ ಶಾಕುಂತಲ'. ವೆಂಕಟರಮಣ ಐತಾಳರು ನಿರ್ದೇಶಿಸಿದ್ದರು. ರಘುನಂದನ ಮೇಷ್ಟ್ರು ಅದನ್ನು ಕನ್ನಡಕ್ಕೆ ಅನುವಾದ ಮಾಡಿದ್ದರು.

ರಘುನಂದನ ನಮಗೆ ಮೊದಲು ಹದಿನೈದು ದಿನಗಳ ಕಾರ್ಯಾಗಾರ ಮಾಡಿದ್ದರು. ಅಲ್ಲಿಯೇ ನನಗೂ ಅವರಿಗೂ ಒಂದು ಬಗೆಯ 'ವಾರ್' ಶುರುವಾಗಿತ್ತು. ಅದು ಮುಂದಿನ ಎರಡು ವರ್ಷ ಮುಂದುವರಿಯಿತು. ಅವರಿಗೆ ನನ್ನನ್ನು ಬ್ರೇಕ್‌ಡೌನ್ ಮಾಡಬೇಕು ಅಂತ. ಆದರೆ ನಾನಾಗ ತುಂಬ ಕಾನ್ಫಿಡೆಂಟ್ ಆಗಿ, 'ನಂಗೆ ಏನು ಗೊತ್ತಿದೆಯೋ ಅದೇ ಸರಿ' ಎನ್ನುವ ಥರ ಇದ್ದೆ. ಅದನ್ನು ಗುರ್ತಿಸಿದ್ದ ಅವರು ನಾನು ಏನೂ ಕೇಳಿದರೂ ಅದಕ್ಕೆ ಉಲ್ಟಾ ಹೇಳುತ್ತಿದ್ದರು. ಆಮೇಲೆ ಐತಾಳರ ನಾಟಕ ಶುರುವಾಯ್ತು. ಅದರಲ್ಲಿ ದುಷ್ಯಂತನ ಪಾತ್ರ ನನಗೇ ಕೊಟ್ಟರು. ಅದುವರೆಗೆ ನಾನು ಎಷ್ಟು ಆತ್ಮವಿಶ್ವಾಸದಲ್ಲಿದ್ದೆನೋ ಅದೆಲ್ಲವೂ ಮೊದಲ ದಿನದ ತಾಲೀಮಿನಲ್ಲಿಯೇ ಒಡೆದುಹೋಯ್ತು. ಮೊದಲ ದಿನದ ತಾಲೀಮಿನಲ್ಲಿ ಹಾಕಿಕೊಳ್ಳೋಣ ಅಂತ ಹೊಸ ಟೀ ಷರ್ಟ್ ಇಟ್ಟುಕೊಂಡಿದ್ದೆ. ಅದನ್ನು ಹಾಕಿಕೊಂಡು ಫ್ಲೋರ್‌ಗೆ ಇಳಿದೆ. ಆದರೆ ಆ ಪ್ರೊಡಕ್ಷನ್‌ನಲ್ಲಿ ನಾನು ಹಿಂಡಿ ಹಿಪ್ಪೆ ಆಗಿಬಿಟ್ಟೆ. ಅದು ಯಕ್ಷಗಾನದ ಮೂವ್‌ಮೆಂಟ್ ಇಟ್ಟುಕೊಂಡು ಮಾಡಿರುವ ಸ್ಟೈಲೈಜ್ಡ್ ಪ್ರೊಡಕ್ಷನ್. ನಾನು ಏನು ಅಂದುಕೊಂಡಿದ್ದೀನೋ ಅವೆಲ್ಲ ಏನೂ ಅಲ್ಲ ಅಂತ ಅಲ್ಲಿಯೇ ಗೊತ್ತಾಯ್ತು. ನನಗೆ ಗೊತ್ತಿರುವುದು ಬಿಟ್ಟು ಏನೇನೋ ಇದ್ಯಲ್ಲಾ ಇದರಲ್ಲಿ... ನಿರ್ದೇಶಕರು ಹೇಳುವುದನ್ನು ನನಗೆ ಮಾಡೋದಿಕ್ಕೆ ಆಗ್ತಿಲ್ವಲ್ಲಾ ಎಂಬ ಸಂಗತಿ ಕಾಡತೊಡಗಿತು. ಅದೊಂದು ನಾಟಕ ನನಗೆ ಪೂರ್ತಿ ಬ್ರೇಕ್‌ಡೌನ್ ಮಾಡಿ ಬಿಸಾಕ್ತು. ಆದರೆ ಆ ನಾಟಕ ಮತ್ತು ನಿರ್ದೇಶಕ ಐತಾಳರು ನನಗೇ ಗೊತ್ತಿಲ್ಲದ ಹಾಗೆ ಸಾಹಿತ್ಯದ ಕುರಿತಾಗಿ, ಭಾಷೆಯ ಕುರಿತಾಗಿ ಬೇರೆ ಬೇರೆ ರೀತಿಯ ಪ್ರಭಾವ ಬೀರಿದರು.

ಅದೇ ವರ್ಷದ ಕೊನೆಯಲ್ಲಿ ರಘುನಂದನ ಅವರು 'ಬಾಹುಬಲಿ ವಿಜಯಂ' ಎಂಬ ನಾಟಕ ಮಾಡಿಸಿದರು. ಅದು ಪಂಪನ 'ಆದಿಪುರಾಣ'ದಿಂದ ತೆಗೆದುಕೊಂಡಿರುವ ನಾಟಕ. ಜಿ.ಪಿ. ರಾಜರತ್ನಂ ಬರೆದಿರುವ ನಾಟಕ. ನಾಂದಿ ಪದ್ಯಕ್ಕೇ ರಘುನಂದನ ಸುಮಾರು ಹದಿನೈದು ದಿನ ತೆಗೆದುಕೊಂಡರು. ಆ ನಾಟಕದಲ್ಲಿ ನಾನು ಮುಖ್ಯಪಾತ್ರವನ್ನೇನೂ ಮಾಡಿರಲಿಲ್ಲ. ಸಂಧಿವಿಗ್ರಹಿ ಎಂಬ ಪಾತ್ರ ಮಾಡಿದ್ದೆ. ಎರಡೇ ಪ್ರವೇಶ ಇರುವ ಪಾತ್ರ. ಒಂದು ಪ್ರವೇಶದಲ್ಲಿ ಎರಡು ಪೇಜು ಉದ್ದದ ಡೈಲಾಗ್ ಇತ್ತು. ಇನ್ನೊಂದು ಪ್ರವೇಶದಲ್ಲಿ ನಾಲ್ಕೇ ಸಾಲು. ನಾಂದಿಪದ್ಯದ ತಾಲೀಮು ಮುಗಿವಷ್ಟರಲ್ಲಿ ನಮ್ಮ ಡೈಲಾಗ್ ಎಲ್ಲ ಸಿದ್ಧಮಾಡಿಟ್ಟುಕೊಂಡಿದ್ದೆವು. ನನ್ನ ಎರಡು ಪುಟದ ಡೈಲಾಗ್ ಒಂದೇ ಸಲಕ್ಕೆ ಓಕೆ ಆಗೋಯ್ತು. ನಂಗೋ ಖುಷಿ; ಮೇಷ್ಟ್ರು ಏನೂ ಹೇಳದೇ ಒಪ್ಪಿಕೊಂಡರಲ್ಲ ಅಂತ. ಆದರೆ ಮತ್ತೊಂದು ಪ್ರವೇಶದಲ್ಲಿ ನಾಲ್ಕು ಸಾಲಿನ ಡೈಲಾಗ್ ಇತ್ತಲ್ಲ... ಅಲ್ಲಿ ಹಿಡ್ಕೊಂಡುಬಿಟ್ಟರು. ಹೇಗೆ ಹೇಳಿದರೂ ಸರಿಯಾಗ್ತಿಲ್ಲ. ಅಲ್ಲಿ ಮತ್ತೆ ನನ್ನನ್ನು ಪೂರ್ತಿ ಬ್ರೇಕ್‌ಡೌನ್ ಮಾಡಿಬಿಟ್ಟರು.

ಆ ವರ್ಷದ ಆರಂಭ ಮತ್ತು ಕೊನೆಯಲ್ಲಿ ಆದ ಎರಡು ಬ್ರೇಕ್‌ಡೌನ್‌ಗಳು ನನ್ನ ಬದುಕಿನ ಬಹುಮುಖ್ಯ ಸಂಗತಿಗಳು. ಆಗ ಅದು ನನಗೆ ತುಂಬ ಇರಿಟೇಷನ್ ಅನಿಸುತ್ತಿತ್ತು. ರಘುನಂದನ ಅವರಿಗೆ ಇಷ್ಟುದ್ದದ ಪತ್ರವನ್ನೂ ಬರೆದಿದ್ದೆ. ಆದರೆ ಬೆಂಗಳೂರಿಗೆ ಬಂದ ಮೇಲೆ ನಮ್ಮಿಬ್ಬರ ಸಂಬಂಧ ಬೇರೆಯದೇ ರೀತಿಯಲ್ಲಿ ಬೆಳೆಯಿತು. ಈಗ ವಾರಕ್ಕೊಂದೆರಡು ದಿನ ಸಿಗದೇ ಹೋದರೆ ಅವರೇ ಫೋನ್ ಮಾಡ್ತಾರೆ, ಇಲ್ಲಾ ನಾನೇ ಹೋಗಿ ಮಾತಾಡ್ತೀನಿ.

◆ **ಸಿನಿಮಾ ಬಗ್ಗೆ ಆಸಕ್ತಿ ಹುಟ್ಟಿದ್ದು ಯಾವಾಗ?**

ನೀನಾಸಮ್ ಮುಗಿಸಿಕೊಂಡು ಒಂದು 'ತಿರುಗಾಟ' ಆದ ಮೇಲೆ ದೊಡ್ಡ ಖಾಲಿತನ